ಗಂಡುತನ ಅವನನ್ನು ಅಣಕಿಸುತ್ತಿತ್ತು. ಅವನು ಅವಳನ್ನು ಬರಸೆಳೆದು ಅಪ್ಪಿಕೊಂಡ. ಆ ಅಪ್ಪುಗೆಯಿಂದ ಬಿಡಿಸಿಕೊಳ್ಳಲೆತ್ನಿಸುತ್ತಾ ನೀಲಾಂಬಿಕೆ ದೇವಿ ಎಂದಳು.

**ಅಮೇಧ್ಯದ ಹಡಿಕೆ ಮೂತ್ರದ ಕುಡಿಕೆ**
**ಎಲುಬಿನ ತಡಿಕೆ ಕೀವಿನ ಹಡಿಕೆ**
**ಸುಡಲೀ ದೇಹದ ಒಡಲವಿಡಿದು ಕೆಡದಿರು**
**ಚೆನ್ನಮಲ್ಲಿಕಾರ್ಜುನ ದೇವನರಿ ಮರುಳೇ**

ಅಪ್ಪಾಜಿರಾಜನಿಗೆ ತನ್ನ ಬಗ್ಗೆ ತಿರಸ್ಕಾರ ಉಂಟಾಗಿ ಅವಳನ್ನು ಬಿಟ್ಟು ಬಿಟ್ಟ. ಕೋಪದಿಂದ ಬುಸುಗುಟ್ಟಿದ. “ನೀನು ಹೀಗೆ ನನ್ನನ್ನು ನಿರಾಕರಿಸುತ್ತಿರುವುದಕ್ಕೇ ನಾನು ಅವಳ ಮನೆಗೆ ಹೋಗುತ್ತಿರುವುದು.”

ನೀಲಾಂಬಿಕಾದೇವಿ ಶಾಂತ ಸ್ವರದಲ್ಲಿ ಕೇಳಿದಳು.

“ಯಾರ ಮನೆಗೆ?”

“ಕಾವೇರಿಯ ಮನೆಗೆ. ಅವಳೆಂದೂ ನನ್ನನ್ನು ನಿರಾಕರಿಸಿಲ್ಲ.”

“ಸರಿ ಮತ್ತೆ. ನೀವು ಅಲ್ಲೇ ಉಳಕೊಳ್ಳಬಹುದಿತ್ತಲಾ? ಇಲ್ಲಿಗ್ಯಾಕೆ ಬಂದಿರಿ?”

“ಹಗಲೂ ಇರುಳೂ ಅಲ್ಲೇ ಇರುವುದಕ್ಕಾಗುತ್ತದೆಯೇ? ಜನ ಏನೆಲ್ಲಾ ಮಾತಾಡಿಕೊಳ್ಳುವುದಿಲ್ಲವೇ?”

ನೀಲಾಂಬಿಕಾದೇವಿಗೆ ಈಗಲೂ ಸಿಟ್ಟು ಬರಲಿಲ್ಲ.

**“ಬೆಟ್ಟದಾ ಮೇಲೊಂದು ಮನೆಯ ಮಾಡಿ**
**ಮೃಗಗಳಿಗಂಜಿದಡೆಂತಯ್ಯ**
**ಸಮುದ್ರದ ತಡಿಯಲ್ಲಿ ಮನೆಯ ಮಾಡಿ**
**ನೊರೆತೊರೆಗಳಿಗಂಜಿದಡೆಂತಯ್ಯ**
**ಸಂತೆಯೊಳಗೊಂದು ಮನೆಯ ಮಾಡಿ**
**ಶಬ್ದಕೆ ನಾಚಿದೊಡೆಂತಯ್ಯ**
**ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ**
**ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿನಿಂದೆಗಳು ಬಂದೊಡೆ**
**ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.”**

ಅಪ್ಪಾಜಿರಾಜ ಆಶ್ಚರ್ಯ ಚಕಿತನಾದ

“ನಿನ್ನ ಪತಿ ಹೀಗೆ ಮಾಡುತ್ತಿರುವುದಕ್ಕೆ ನೀನೇ ಕಾರಣ. ಅದಕ್ಕೆ ನಿನಗೆ ನನ್ನ ಮೇಲೆ ಕೋಪ ಬರಬೇಕಿತ್ತು. ಇಲ್ಲದ ಸಂಬಂಧವನ್ನು ಹುಡುಕಿ ಗಂಡನೊಡನೆ ಜಗಳ ಮಾಡುವುದು ಹೆಂಡತಿಯ ಸ್ವಭಾವವೆನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ನಿನಗೆ ನಾನು ಕಾವೇರಿಯಲ್ಲಿಗೆ ಹೋಗುತ್ತಿರುವುದಕ್ಕೆ ಏನೂ ಅನಿಸುವುದಿಲ್ಲವೇ?”

ನೀಲಾಂಬಿಕಾ ದೇವಿಯ ಸ್ವರ ಆಗಲೂ ಏರಲಿಲ್ಲ.

“ಇಲ್ಲ. ರಾಜವಂಶೀಯರು ಕೇವಲ ಒಂದು ಹೆಣ್ಣಿನಲ್ಲಿ ಸಂತೃಪ್ತಿ ಅರಸುವುದಿಲ್ಲ. ರಾಜಾನೋ ಬಹೂವಲ್ಲಭ ಎಂದು ಓದಿದ್ದೇನೆ. ನೀವು ಇನ್ನೊಬ್ಬಳನ್ನು ಅರಸಿಕೊಂಡು ಹೋದರೂ ನಾನೇನೂ ಅನ್ನುವುದಿಲ್ಲ.